ಕಾಣುತ್ತಿದ್ದ. ಅದೇ ದೃಶ್ಯಗಳೊಂದಿಗೆ ಒಂದು ದುಃಸ್ವಪ್ನದೊಂದಿಗೆ ಅವನು ನನ್ನನ್ನು ಹಿಂಬಾಲಿಸುತ್ತಿದ್ದನು.

ಆ ರೆಸ್ಟೊರೆಂಟ್‌ನಲ್ಲಿ ಬಹಳ ಜನರಿದ್ದರು. ನಾನು ಈ ಗುಂಗಿನಲ್ಲಿದ್ದುದರಿಂದ ಅವರ್‍ಯಾರನ್ನೂ ಗಮನಿಸಲಿಲ್ಲ. ಟೀ ಕುಡಿದು ಎದ್ದು ಬಂದ ನಂತರವೇ ಅವನು ನನ್ನ ಕಣ್ಣಿಗೆ ಬಿದ್ದದ್ದು.

ಅವನು ಮೇಜಿನ ಮೇಲಿನಿಂದ ಎಂಜಲು ತಟ್ಟೆ ಲೋಟಗಳನ್ನು ತೆಗೆದು ಟ್ರೇನಲ್ಲಿಟ್ಟು ಒದ್ದೆ ಬಟ್ಟೆಯಿಂದ ಮೇಜನ್ನು ಒರೆಸಿ ಶುಭ್ರ ಮಾಡುತ್ತಿದ್ದನು.

ಆ ಹದಿನಾಲ್ಕು–ಹದಿನೈದು ವಯಸ್ಸಿನ ಮುಖವನ್ನು ನೋಡಿದಾಗ ನಾನು ಚಕಿತನಾದೆ.

ಇವನನ್ನು ನಾನೆಲ್ಲೋ ನೋಡಿದ ಹಾಗಿದೆಯಲ್ಲಾ!

ಆದರೆ ನಾನು ಬಹು ಹೊತ್ತು ಯೋಚಿಸಿ ನಿಲ್ಲಬೇಕಾಗಿರಲಿಲ್ಲ. ತಟ್ಟನೆ ಮಿಂಚು ಹೊಳೆದಂತೆ ನನ್ನ ಮನಸ್ಸಿನಲ್ಲಿ ಸ್ಪಷ್ಟ ಚಿತ್ರ ತೋರಿತು. ಇವನು ಆ ಸಿನಿಮಾದಲ್ಲಿ ಬಂದ ಆ ಹುಡುಗನಲ್ಲವೇ?

ಆ ಚಿತ್ರದ ನಾಯಕನು ಅನಾಥಾಲಯದಲ್ಲಿ ತನ್ನ ಬಾಲ್ಯವನ್ನು ಕಳೆಯುವಾಗ ಅವನೊಂದಿಗಿದ್ದವನು. ಅವನ ನಿಕಟ ಸ್ನೇಹಿತನು. ಅಲ್ಲಿಯ ಊಟ ತಿಂಡಿ ಸಾಲಲಿಲ್ಲವೆಂದು ಅಡಿಗೆಯವನೊಂದಿಗೆ ಜಗಳವಾಡಿದವನು. ಚಾಪಲ್‌ನ ಹಿಂದಿದ್ದ ಪೊದೆಯಲ್ಲಿ ಕಾಲುವೆಯ ಹತ್ತಿರ ಮರೆಯಲ್ಲಿ ನಿಂತು ಬೀಡಿ ಸೇದುತ್ತಿದ್ದವನು. ಅವನ ಜೊತೆಗಾರನೊಬ್ಬನಿಗೆ ಹುಷಾರಿಲ್ಲದೆ ಹೋದಾಗ ಹಗಲೂ ರಾತ್ರಿ ಎಲ್ಲವನ್ನೂ ಮರೆತು ಅವನಿಗೆ ಶುಶ್ರೂಷೆ ಮಾಡಿದವನು. ಅವನು ಸತ್ತು ಹೋದಾಗ ಅವನ ಶವಪೆಟ್ಟಿಗೆಯ ಮುಂದೆ ಮಳೆ ಬರುವ ಮುಂಚೆ ಸೇರಿ ಕೊಂಡಿರುವ ಮೋಡದಂತೆ ಬಹುಹೊತ್ತು ನಿಂತವನು...

ಹೌದು ಅವನೇ...

ನಾನು ಇನ್ನೊಂದು ವಿಷಯವನ್ನೂ ಆಗ ಗಮನಿಸಿದೆ.

ನಾನು ಮಾತ್ರವಲ್ಲ ಇನ್ನೂ ಕೆಲವರು ಆ ಹುಡುಗನನ್ನೇ ಕುತೂಹಲದಿಂದ ನೋಡುತ್ತಿದ್ದರು.

ನನಗೆ ಆಶ್ಚರ್ಯವೆನಿಸಿತು.

ಸಿನಿಮಾದಲ್ಲಿ ಅಷ್ಟು ಚೆನ್ನಾಗಿ ಅಭಿನಯಿಸಿದ ಅವನು ಇಲ್ಲಿ ಈ ಎಂಜಲು ಪ್ಲೇಟುಗಳ ನಡುವೆ...

ನಾನು ಆ ಹುಡುಗನನ್ನು ಕೇಳಿದೆ,

‘ಆ ಸಿನಿಮಾದಲ್ಲಿ ನೀನೇ ಅಲ್ಲವೇ...’

ಆಗ ಅಲ್ಲಿಯ ಸೂಪರ್‌ವೈಸರ್ ಬೇಟೆಯ ಹಕ್ಕಿಯನ್ನು ಜಾಗ್ರತೆಯಿಂದ ಹಿಡಿಯಲೆತ್ನಿಸುವಂತೆ ಜೋರಾಗಿ ಕೂಗಿದನು,

‘ಟೇಬಲ್ ಕ್ಲೀನ್...’

ಅವನು ಬೆಚ್ಚಿ ಬಿದ್ದನು. ಒಂದು ಯಂತ್ರದಂತೆ ಪ್ಲೇಟುಗಳನ್ನು ಕಪ್ಪುಗಳನ್ನೂ ಟ್ರೇನಲ್ಲಿಟ್ಟು ಬೇಗ ಬೇಗನೆ ಮೇಜನ್ನು ಒರೆಸಿ ಹೊರಟು ಹೋದನು.

ಅವನು ನನ್ನೊಂದಿಗೆ ಏನೂ ಮಾತನಾಡಲಿಲ್ಲ. ನನ್ನ ಮುಖದತ್ತ ನೋಡಲೂ ಇಲ್ಲ. ಸೂಪರ್‌ವೈಸರ್‌ನ ಕೂಗು ಅವನನ್ನು ಮಾತ್ರವಲ್ಲ. ಅವನಂತಿರುವ ಇತರ ಹುಡುಗರನ್ನೂ ನಡುಗಿಸಿದಂತಿತ್ತು.

ನಾನು ಆಮೇಲೆ ಅವನ ಬಗ್ಗೆ ಕೌಂಟರ್‌ಲ್ಲಿದ್ದ ಮನುಷ್ಯ ‘ಪೊಟ್ಟೆ’ಯನ್ನು ಕೇಳಿದೆನಾದರೂ ಅವನು ಹೇಳಿದ ಒಂದು ಮಾತೂ ನನಗರ್ಥವಾಗಲಿಲ್ಲ.